ವರ್ಷ	ರಾಜ್ಯ ಯೋಜನೆ		ವಿಶೇಷ ಕೇಂದ್ರೀಯ ಸಹಾಯ	
	ಅನುದಾನ	ಖರ್ಚು	ಅನುದಾನ	ಖರ್ಚು
ವಿಶೇಷ ಘಟಕ ಯೋಜನೆ				
1992-93	17602.07	16049.17	1310.00	1310.00
1993-94	28069.49	25893.95	1282.71	1282.71
1994-95	30353.03	28921.91	1873.76	1873.76
ಗಿರಿಜನ ಉಪಯೋಜನೆ				
1992-93	2046.85	1349.21	327.42	327.42
1993-94	3729.96	3197.32	439.76	439.76
1994-95	4639.69	4576.21	409.03	409.03

ರಾಜ್ಯದಲ್ಲಿರುವ ನೂಲಿನ ಗಿರಣಿಗಳ ಸಂಖ್ಯೆ

537 - ಶ್ರೀ ಬಿ.ಎಸ್.ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಸಕ್ಕರೆ,ಜವಳಿ, ವಿಜ್ಞಾನ ಮತ್ತು ತಂತ್ರಜ್ಞಾನ, ಜೀವಿಶಾಸ್ತ್ರ, ಮತ್ತು ಪರಿಸರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಒಟ್ಟು ನೂಲಿನ ಗಿರಣಿಗಳೆಷ್ಟು? (ಪ್ರತಿ ಗಿರಿಣಿಯ ವಿವರ ನೀಡುವುದು) ಇವುಗಳ ಉತ್ಪಾದನಾ ಸಾಮರ್ಥ್ಯವೆಷ್ಟು? ಇವುಗಳಲ್ಲಿ ಲಾಭದಲ್ಲಿರುವ ಸಂಸ್ಥೆಗಳೆಷ್ಟು? ಅವುಗಳು ಯಾವುವು?

ಆ) ನಷ್ಟ ಅನುಬವಿಸುತ್ತಿರುವ ಗಿರಣಿಗಳೆಷ್ಟು? ಅವುಗಳು ಯಾವುವು? ಮತ್ತು ಮುಚ್ಚಿರುವ ಗಿರಣಿಗಳೆಷ್ಟು?

ಇ) ನಷ್ಟದಲ್ಲಿರುವ ಮತ್ತು ಮುಚ್ಚಿರುವ ಸಂಸ್ಥೆಗಳ ಪುನಶ್ಚೇತನಕ್ಕೆ ಕೈಗೊಂಡಿರುವ ಕ್ರಮಗಳೇನು?

ಶ್ರೀ ಪಿ.ಸಿ. ಸಿದ್ದನಗೌಡರ್ (ಸಕ್ಕರೆ, ಜವಳಿ, ವಿಜ್ಞಾನ ಮತ್ತು ತಂತ್ರಜ್ಞಾನ, ಜೀವಿಶಾಸ್ತ್ರ ಮತ್ತು ಪರಿಸರ ರಾಜ್ಯ ಸಚಿವರು) :

ಅ) ಕರ್ನಾಟಕ ರಾಜ್ಯದಲ್ಲಿ ಒಟ್ಟು 50 ನೂಲಿನ ಗಿರಣಿಗಳಿವೆ. ಪ್ರತಿ ಗಿರಣಿಯ ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ. ಇವುಗಳ ಉತ್ಪಾದನಾ ಸಾಮರ್ಥ್ಯ 10.90 ಲಕ್ಷ ಕದಿರುಗಳು.ಇವುಗಳಲ್ಲಿ ಕೆಳಕಂಡ ಎರಡು ಸಹಕಾರಿ ನೂಲಿನ ಗಿರಣಿಗಳು ಲಾಭದಲ್ಲಿರುತ್ತವೆ.

1) ಬನಹಟ್ಟಿ ಸಹಕಾರಿ ನೂಲಿನ ಗಿರಣಿ, ನಿ, ಬನಹಟ್ಟಿ, ಬಿಜಾಪುರ ಜಿಲ್ಲೆ.

2) ಗದಗ್ ಸಹಕಾರಿ ನೂಲಿನ ಗಿರಣಿ ನಿ, ಹುಲಕೋಟಿ, ಧಾರವಾಡ ಜಿಲ್ಲೆ.

(ಖಾಸಗಿ ಗಿರಣಿಗಳ ಮಾಹಿತಿ ಲಭ್ಯವಿರುವುದಿಲ್ಲ).

ಆ) ಕೆಳಕಂಡ ಎಂಟು ಸಹಕಾರಿ ನೂಲಿನ ಗಿರಣಿಗಳು ನಷ್ಟ ಅನುಭವಿಸುತ್ತಿವೆ.

1) ರೈತರ ಸಹಕಾರಿ ನೂಲಿನ ಗಿರಣಿ ನಿ, ಹುಲಕೋಟಿ, ಧಾರವಾಡ ಜಿಲ್ಲೆ.

2) ಬೆಳಗಾವಿ ಸಹಕಾರಿ ನೂಲಿನ ಗಿರಣಿ ನಿ. ಬೆಳಗಾವಿ.

3) ಸೋಮೇಶ್ವರ ಸಹಕಾರಿ ನೂಲಿನ ಗಿರಣಿ ನಿ, ಲಕ್ಷೆಶ್ವರ, ಧಾರವಾಡ ಜಿಲ್ಲೆ.

4) ತುಂಗಭದ್ರ ಸಹಕಾರಿ ನೂಲಿನ ಗಿರಣಿ ನಿ, ರಾಣೆಬೆನ್ನೂರು, ಧಾರವಾಡ ಜಿಲ್ಲೆ.

5) ಮಲಪ್ರಭ ಸಹಕಾರಿ ನೂಲಿನ ಗಿರಣಿ ನಿ, ಸವದತ್ತಿ, ಬೆಳಗಾವಿ.

6) ವೆಂಕಟೇಶ್ ಸಹಕಾರಿ ನೂಲಿನ ಗಿರಣಿ ನಿ, ಅಣ್ಣಿಗೇರಿ, ಧಾರವಾಡ ಜಿಲ್ಲೆ.

7) ರೈತರ ಸಹಕಾರಿ ನೂಲಿನ ಗಿರಣಿ ನಿ, ರಾಣೆಬೆನ್ನೂರು, ಧಾರವಾಡ ಜಿಲ್ಲೆ.

8) ರಾಯಚೂರು ಸಹಕಾರಿ ನೂಲಿನ ಗಿರಣಿ ನಿ, ರಾಯಚೂರು.

ಈ ಕೆಳಕಂಡ ಎರಡು ಸಹಕಾರಿ ನೂಲಿನ ಗಿರಣಿಗಳು ಮುಚ್ಚಿರುತ್ತವೆ.

1) ಬಿಜಾಪುರ ಸಹಕಾರಿ ನೂಲಿನ ಗಿರಣಿ ನಿ, ಬಿಜಾಪುರ

2) ಭಾಗಲಕೋಟೆ ಸಹಕಾರಿ ನೂಲಿನ ಗಿರಣಿ ನಿ, ಬಾಗಲಕೋಟೆ, ಬಿಜಾಪುರ ಜಿಲ್ಲೆ.

ಇ) ನಷ್ಟದಲ್ಲಿರುವ 8 ಸಹಕಾರಿ ನೂಲಿನ ಗಿರಣಿಗಳ ಪುನ:ಶ್ಚೇತನಕ್ಕೆ ಎನ್.ಸಿ.ಡಿ.ಸಿ. ವತಿಯಿಂದ ಆರ್ಥಿಕ ಸಹಾಯ ಪಡೆಯಲು ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ. ಮುಚ್ಚಿರುವ 2 ಸಹಕಾರಿ ನೂಲಿನ ಗಿರಣಿಗಳನ್ನು ಖಾಸಗೀಕರಣಗೊಳಿಸಲು ತೀರ್ಮಾನಿಸಲಾಗಿದೆ.

ANNEXURE

LIST OF TEXTILE MILLS UNDER CO-OPERATIVE, STATE GOVT., N.T.C. AND PRIVATE SECTOR IN KARNATAKA STATE AS ON 31.12.95

Sl. No.	*Name and Address of Spinning Mills*	*No. of Spindles*
1	*2*	*3*
I.	**CO-OPERATIVE SECTOR**	
1.	Banahatti Co-op.Spg,Mills Ltd., Banahatti, Bijapur District	25,080
2.	Gadag Co-op.Spg. Mills Ltd., Hulikote, Dharwad District	25,056
3.	Farmers Co-op.spg. Mills Ltd., -do-	25,920
4.	Sri Someshwara Co-op.spg, Mills Ltd., Lakshmeshwara, Dharwad District	24.960
5.	Thungabhadra Co-op.spg. Mills Ltd., Ranebennur, Dharwad District	20.640
6.	Venkateswara Co-op.spg. Mills Ltd., Annigari, Dharwad District	24.960
7.	Raithara Sahakari Noolina Girani,Hanumanakatti, Ranebennur, Dharwad District	24.960
8.	Belgaum Co-op.Spg,Millas Ltd.,Pant Balekundri, Belgaum	25,088
9.	Malaprabha -do- Saundatti, Belgaum District	24,960
10.	Raichur Co-op.Spg, Mills Ltd. Raichur	24,920
11.	Bijapur -do- Bijapur District	25,086
12.	Bagalkote Co-op.Spg, Mills Ltd., Bagalkote, Bijapur District	25,536
		2,97,166

1	2	3
II.	**STATE GOVERNMENT**	
13.	Mahadeva Textile Mills Ltd., Hubli, Dharward District	25,192
III	**NATIONAL TEXTILE CO-OPERATION (NTC) (CENTRAL GOVT.)**	
14.	Minerva Mills, Magadi Road, Bangalore-23	35,968
15.	Mysore Spg.& Mfg. Mills, Malleshwaram, Bangalore-3	(Mill Burnt)
16.	Sri Yellamma Cotton, Wool and Silk Mills, Yellamma Town, Chitradurga District	29,254
17.	Mahboob Shahi Gulbarga Mills, Gulbarga District	21,922
		87,154
IV.	**PRIVATE SECTOR**	
a)	**Bangalore District**	
18.	Binny Ltd., B'lore, Cotton, Woollen & Silk Mills Ltd. Agrahara, Bangalore-25	59,368
19.	Ramakumar Mills Ltd., Rajajinagar, Bangalore	24,800
20.	Gopalakrishna Textile Mills Pvt.Ltd., Dasarahally, Bangalore	25,062
21.	Subhadra Textile Pvt.Ltd.,Dasarahally,Bangalore	13,323
22.	Sri Valliyappa Textiles Ltd., Hejjala Post, Ramanagar Tq.	27,166
23.	T.R. Mills, Chamarajpet, Bangalore	12,096
24.	Doddaballpur Spg.Mills, Doddaballpur, B'lore Dist.	2,506
25.	Sona Synthetics, Kanakapura, Bangalore District	12,576
26.	Chandra Spg.&Wvg. Mills Ltd. Chamarajpet, B'lore	12,100

1	2	3
b)	**Belgaum District**	
27.	Gokak Mills Ltd., Gokak Falls, Delgaum District	81,310
28.	Gogaty Textiles Mills Ltd., Ekthi, Belgaum District	19,232
c)	**Bellary District**	
29.	Sri Kottrueshwara Mills, Kottur, Bellary District	3,088
30.	Bellary Spg.& Weaving Mills(P) Ltd., Bellary	13,000
d)	**Chitradurga**	
31.	Sri Jayalaxmi Textile Garehatti, Chitradurga	25,204
32.	Chitradurga Spintex Ltd., Challegere,Chitradurga	*768
33.	Davanagere Cotton Mills(P) Ltd., Davanagere, Chitradurga District	41.368
34.	Sri Siddeshwara Textiles Mills, Davanagere	24,880
35.	Sri Anjaneya Textile Mills, Davanagere	11,960
36.	Ganesh Textiles Mills, Davanagere	25,000
37.	Sri Chandrodaya Mills Ltd., Davanagere	22,096
e)	**Dharwad District**	
38.	Nandhi Hashi Textiles Ltd., Naragunda, Dharwad District	23,356
39.	Bhoruka Textiles, Bayapura, Dharwad District	17,976
40.	Krishna Spinners Ltd., Hubli, Dharwad	11,040
41.	Davanagere Cotton Mills, Gadag, Dharwad District	21,240
f)	**Mysore District**	
42.	Sri Krishnarajendra Mills Ltd., Mysore	44,976
43.	Sri Kumaravel Textiles Ltd., Periyapatna,	

1	2	3
MYSORE DISTRICT		9,680
44.	Sri Meenakshi Sundaram Textiles Ltd., Hunsur, Mysore District	12,376
45.	Sujatha Textiles Mills, Nanjangud, Mysore Dist	27,984
46.	Velan Textiles (P) Ltd., Chamarajanagar, Mysore Dist	12,544
47.	Vishnu Textiles, Periyapatna, Mysore District	9,680
48.	Mari Spinners(P) Ltd., Mysore	17,616
49.	Sridevi Textiles (P) Ltd., Mysore, Mysore District	8,208
50.	Pasari Spinning Mills, Nanjangud, Mysore District	6,000
		10,90,267

ಪರಿಶಿಷ್ಟರ ಸ್ಥಿತಿಗತಿಗಳ ಬಗ್ಗೆ ಸಮೀಕ್ಷೆ.

538 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿ ಪರಿಶಿಷ್ಟರ ಸ್ಥಿತಿಗಳ ಬಗ್ಗೆ ಸಮೀಕ್ಷೆಯನ್ನು ಸರ್ಕಾರ ನಡೆಸಿದೆಯೆ? ಸಮೀಕ್ಷೆ ಯಾವಾಗ ಪ್ರಾರಂಭಿಸಲಾಯಿತು? ಯಾವಾಗ ಅಂತ್ಯಗೊಂಡಿದೆ?*

ಆ) *ಸಮೀಕ್ಷೆ ಕಾರ್ಯಕ್ಕೆ ಸರ್ಕಾರದಿಂದ ಖರ್ಚು ಮಾಡಿರುವ ಹಣ ಎಷ್ಟು? ಸಮೀಕ್ಷಾ ಕಾರ್ಯದ ಉದ್ದೇಶವೇನು?*

ಇ) *ಬಡ ದಲಿತ ಕುಟುಂಬ ವರ್ಗದಲ್ಲಿ ಮೃತ ಪಟ್ಟರೆ ಶವ ಸಂಸ್ಕಾರಕ್ಕಾಗಿ 1000-00 ರೂಪಾಯಿ ಸರ್ಕಾರ ನೀಡಲು ನಿರ್ಧರಿಸಿದೆಯೇ? ಹಾಗಿದ್ದಲಿಲ್ಲ ಈವರೆಗೆ ಎಷ್ಟು ಪ್ರಕರಣದಲ್ಲಿ ಈ ರೀತಿ ಸಹಾಯಧನ ನೀಡಲಾಗಿದೆ?*

ಶ್ರೀ ರಮೇಶ್ ಸಿ. ಜಿಗಜಿಣಗಿ (ಸಮಾಜ ಕಲ್ಯಾಣ ಸಚಿವರು) :

ಅ) ಸರ್ಕಾರ ಡಾ।। ಬಿ.ಆರ್. ಅಂಬೇಡ್ಕರ್ ಸಂಶೋಧನಾ ಕೇಂದ್ರದ ಮೂಲಕ ಪ.ಜಾತಿ : ಪ.ವರ್ಗಗಳ ಸಾಮಾಜಿಕ ಆರ್ಥಿಕ ಮತ್ತು ಶೈಕ್ಷಣಿಕ ಸ್ಥಿತಿಗತಿಗಳ ಬಗ್ಗೆ ಸಮೀಕ್ಷೆಯನ್ನು ಅಕ್ಟೋಬರ್-2, 1995 ರಿಂದಲೇ ಎಲ್ಲಾ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಪ್ರಾರಂಭಿಸಿದೆ. ಈ ಸಮೀಕ್ಷೆಯ ಕಾರ್ಯವು ಬಹುತೇಕ ಜಿಲ್ಲೆಗಳಲ್ಲಿ ಶೇಕಡ90ರಷ್ಟು ಪೂರ್ಣಗೊಂಡಿರುತ್ತದೆ. ಸದ್ಯದಲ್ಲಿಯೇ ಪೂರ್ಣ ಸಮೀಕ್ಷೆಯ ಕಾರ್ಯವು ಮುಕ್ತಾಯಗೊಳ್ಳಲಿದೆ.